# ಮನೋಗತ

■ **ವಿನೋದ್ ಕುಮಾರ್ ಆರ್.ವಿ.**

ಕಲೆ: ಸಂತೋಷ್ ಸಸಿಹಿತ್ಲು

ಅಬ್ಬಾ! ಎಲ್ಲಾ ಕೆಲಸ
ಮುಗಿಯಿತು
ಅಂದುಕೊಂಡೆ, ಇನ್ನು
ಸಮಯ ನೀಡಬಹುದು
ಓದಿಗೆ
ಯಾವುದೇ ಅಡೆ ತಡೆ ಇಲ್ಲ
ಹಾದಿಗೆ


ಸೂರ್ಯಾಸ್ತವೂ ಆಯಿತು
ಊರೆಲ್ಲಾ ತಂಪು
ಕೊಠಡಿಯಲ್ಲಿ ಸಿದ್ಧಗೊಂಡವು
ಟೇಬಲ್, ಟೇಬಲ್ ಲ್ಯಾಂಪು

ಮನದಲ್ಲಿ ಹಚ್ಚಲು
ಜ್ಞಾನದ ದೀವಿಗೆ
ಜೋಡಿಸಿಕೊಂಡೆ
ಒಂದೊಂದೇ ಹೊತ್ತಿಗೆ

ಕುತೂಹಲ ಕೆರಳಿ
ಆಸಕ್ತಿಯು ಅರಳಿ
ಪುಸ್ತಕವೊಂದು ಕೈಗೆತ್ತಿಕೊಂಡೆ
ಧನ್ಯತೆಯ ತಾಳಿ

ತಂಗಿ ಯಾಕೋ ನಕ್ಕಳು
ನನ್ನ ನೋಡಿ
ಕಾರಣ ಗೊತ್ತಾಗಲಿಲ್ಲ,
ಇವಳದ್ದು ಇದ್ದದ್ದೇ ಎಂದುಕೊಂಡು
ಕೈಗೆ ಎತ್ತಿಕೊಂಡ ಪುಸ್ತಕದ
ಶೀರ್ಷಿಕೆ ಓದಿದೆ, ಹೆಸರು
ತಂಗಿಗೂ ಸಮಯ ನೀಡಿ ■





**ಉದಿತಾ ಪ್ರತೀಕ್ಷಾ ಕೆ.**
8ನೇ ತರಗತಿ, ಮರಿಯಮ್ ನಿಲಯ ಹೈಸ್ಕೂಲ್, ಬೆಂಗಳೂರು

## ಕುಂಚ ಪ್ರಪಂಚ



**ಲಿತಿಶಾ ಎ.**
3ನೇ ತರಗತಿ, ಡೆಲ್ಲಿ ಪಬ್ಲಿಕ್ ಸ್ಕೂಲ್, ಬೆಂಗಳೂರು



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in